ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾದ ದಿಃ 16.04.2026
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.
ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

3. ಈ ದಾವೆಯಲ್ಲಿ ಉಳಿಕೆ ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರದಲ್ಲಿ ದೊಡ್ಡ ಗಧ್ಯಪ್ಪನಿಗೆ 4 ಜನ ಮಕ್ಕಳು ಆ ಪೈಕಿ ವಾದಿಯ ತಂದೆ ಕೂಡ ಸೇರಿರುತ್ತಾರೆ ಎಂದು ಹೇಳಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದೊಡ್ಡ ಗಧ್ಯಪ್ಪನ ಮಕ್ಕಳು 1980 ರಲ್ಲಿ ಮೂಲ ಆಸ್ತಿಯನ್ನು ಸಮಾನವಾಗಿ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ. ಆ ರೀತಿ 6 ಎಕರೆ 29 ಗುಂಟೆ ಪೈಕಿ ಆತನ ಮಕ್ಕಳಿಗೆ ತಲಾ 1 ಎಕರೆ 22 ಗುಂಟೆ ಬಂದಿರುತ್ತದೆ ಎಂದರೆ ಗೊತ್ತಿಲ್ಲ. ಆ ರೀತಿ ವಾದಿಯ ತಂದೆಗೂ ಭಾಗ ಬಂದಿತ್ತು ಮತ್ತು ಅದು ಈ ದಾವೆಯ ಸೊತ್ತು ಆಗಿದೆ ಎಂದರೆ ಗೊತ್ತಿಲ್ಲ. ವಾದಿಯು ಯಾವ ದಾಖಲೆಗಳನ್ನು ಹಾಜರುಮಾಡಿದ್ದಾರೆ ಎಂಬುದನ್ನು ತಿಳಿದುಕೊಂಡಿಲ್ಲ.

4. ನಿಪಿ-2 ರ ಪ್ರಕಾರ ದಾವಾ ಸೊತ್ತು ಮೂಲ ದೊಡ್ಡ ಗಧ್ಯಪ್ಪನ ಅಣ್ಣ ಸೊಣ್ಣಪ್ಪನ ಹೆಸರಿನಲ್ಲಿತ್ತು ಎಂದರೆ ಗೊತ್ತಿಲ್ಲ. ಆ ಸೊಣ್ಣಪ್ಪನಿಗೆ ವಾರುಸುದಾರರು ಇಲ್ಲದೆ ತೀರಿಕೊಂಡ ಎಂದರೆ ಗೊತ್ತಿಲ್ಲ, ಆತ ತೀರಿಕೊಂಡ ಮೇಲೆ ಆತನ ಸಹೋದರನಾದ ದೊಡ್ಡ ಗಧ್ಯಪ್ಪನ ಮಕ್ಕಳು ವಾದಿಯ ತಂದೆಯನ್ನು ಹೊರತುಪಡಿಸಿ ಸೊಣ್ಣಪ್ಪನ ಸೊತ್ತಿನ ಖಾತೆಯನ್ನು ಮಾಡಿಸಿಕೊಂಡರು ಎಂದರೆ ಗೊತ್ತಿಲ್ಲ. ವಾದಿಯ ತಂದೆಗೆ ಮತ್ತು ವಾದಿರವರಿಗೆ ದಾವಾ ಸೊತ್ತಿನಲ್ಲಿ ಹಕ್ಕು ಇದ್ದರು ಕೂಡ ಪ್ರತಿವಾದಿ-5, 14 ರಿಂದ 16 ರವರುಗಳು ವಾದಿಗೆ ಮೋಸ ಮಾಡಿ ನನಗೆ ಸೊತ್ತನ್ನು ಮಾರಾಟ

ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ಎಲ್ಲಾ ವಿಚಾರಗಳು ಗೊತ್ತಿದ್ದರು ಕೂಡ ಸೊತ್ತನ್ನು ದುರುದ್ದೇಶದಿಂದ ಪಡೆದಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಃ

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ. ಹೇ. ಕೇ. ಸರಿ ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.